ಇಂದು ದಿನಾಂಕ 19-08-2021 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟಿ ಸವಾಲು: ಶ್ರೀ ಎ.ಜಿ.ಪಿ.ರವರಿಂದ:**

ಈಗ ನಮ್ಮ ಜಮೀನಿನ ಸರ್ವೆ ನಂ.511:8. ಒಟ್ಟು 22 ಜನರ ಹೆಸರಿನಲ್ಲಿ ನೋಟಿಸ್ ಬಂದಿತ್ತು. ಸರ್ವೆ ನಂ.511:5 ರಲ್ಲಿ ಒಟ್ಟು ಎಷ್ಟು ಜಮೀನು ಭೂ ಸ್ವಾಧೀನ ಆಗಿದೆ ಗೊತ್ತಿಲ್ಲ. ಗದ್ಯಾಳ ಗ್ರಾಮದಲ್ಲಿ ನನಗೆ 4 ಎಕರೆ ಜಮೀನು ಇದೆ. ತಕರಾರನ್ನು ನಾನು ಒಬ್ಬನೇ ಸಲ್ಲಿಸಿದ್ದೇನೆ. ಅದರ ತಾರೀಖು ನೆನಪಿಲ್ಲ. ಹಣ ಇನ್ನೂ ತೆಗೆದುಕೊಂಡಿಲ್ಲ. ಮೊದಲು ನಿಶಾನೆ ಪಿ-10 ರಲ್ಲಿ ನೀರಾವರಿ ಬಗ್ಗೆ ಮತ್ತು ಕಬ್ಬು ಬೆಳೆದ ಬಗ್ಗೆ ನಮೂದು ಇಲ್ಲಾ ಎಂದರೆ ಸರಿಯಲ್ಲ. ನಮ್ಮ ಜಮೀನು ಮಡ್ಡಿ ಜಮೀನು ಎಂದರೆ ಸಾಕ್ಷಿ ಕೆರೆ ಆಗುವ ಪೂರ್ವದಲ್ಲಿ ಮಡ್ಡಿ ಜಮೀನು ಇತ್ತು, ನಂತರ ನೀರಾವರಿ ಆಗಿರುತ್ತದೆ. ಭೂಸ್ವಾಧೀನ ಸಮಯದಲ್ಲಿ ನಮ್ಮ ಜಮೀನಿನಲ್ಲಿ ಯಾವುದೇ ಬೆಳೆ ಇರಲಿಲ್ಲ ಎಂದರೆ ಸರಿಯಲ್ಲ, ಬೆಳೆ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿಶಾನೆ ಪಿ-9 ಕಾಲಪರಿಮಿತಿಯಲ್ಲಿ ಇಲ್ಲಾ ಎಂದರೆ ಸರಿಯಲ್ಲ. ಭೂ ಸ್ವಾಧೀನಪಡಿಸುವಾಗ ಜಮೀನಿಗೆ ನೀರಾವರಿ ಸೌಲಭ್ಯ ಇರಲಿಲ್ಲ. ಜಮೀನಿಗೆ ಒಟ್ಟು ಎಷ್ಟು ಪರಿಹಾರ ಬಂದಿದೆ ಗೊತ್ತಿಲ್ಲ.

ಭೂಸ್ವಾಧೀನ ಆಗುವಾಗ ಜಮೀನಿನಲ್ಲಿ ಕಬ್ಬು ಬೆಳೆಯುತ್ತಿರಲಿಲ್ಲ. ಭೂ ಸ್ವಾಧೀನ ಸಮಯದಲ್ಲಿ ಎಲ್ಲಾ ಜಮೀನುಗಳು ಮಡ್ಡಿ ಜಮೀನುಗಳು ಇದ್ದವು ಎಂದರೆ ಸರಿ. ಆ ಸಮಯದಲ್ಲಿ ನಾವು ಕಬ್ಬನ್ನು ಕಾರ್ಖಾನೆಗೆ ಕಳುಹಿಸಿಲ್ಲ. ನಾನು ಹಾಜರಪಡಿಸಿರುವ ದಾಖಲೆಗಳು ಗದ್ಯಾಳ ಗ್ರಾಮಕ್ಕೆ ಸಂಬಂಧಪಟ್ಟಿದ್ದು ಎಂದರೆ ಸರಿಯಲ್ಲ. ಅವುಗಳು ಗೋಟೆ ಗ್ರಾಮಕ್ಕೆ ಸಂಬಂಧಪಟ್ಟಿದ್ದು ಇರುತ್ತವೆ. ನಿಶಾನೆ ಪಿ-12 ನನ್ನ ಹೆಸರಿನಲ್ಲಿ ಇಲ್ಲ ಎಂದರೆ ಸರಿ. ಸಾಕ್ಷಿ ನನ್ನ ಅಣ್ಣತಮ್ಮಂದಿರ ಹೆಸರಿನಲ್ಲಿ ಇದೆ ಎನ್ನುತ್ತಾರೆ. ನನ್ನ ಹೆಸರಿನಲ್ಲಿ ಕಬ್ಬು ಕಳುಹಿಸಿಲ್ಲ. ಎಕರೆಗೆ ಕಬ್ಬು ಬೆಳೆಯಲು ಸುಮಾರು 50% ಖರ್ಚು ಬರುತ್ತದೆ. ನಿಶಾನೆ ಪಿ-13 ರಲ್ಲಿ ಕಟಾವು ಸಾರಿಗೆ ಒಳಗೊಂಡು ಬೆಲೆ ನಮೂದು ಇದೆ ಎಂದರೆ ಸರಿ. ನಮ್ಮ ಜಮೀನಿನಲ್ಲಿ ಕಬ್ಬು ಬೆಳೆಯುತ್ತಿದ್ದೇನೆ ಮತ್ತು ಎಕರೆಗೆ 40 ಟನ್ ಅಷ್ಟು ವಾಡಿ ಬರುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನಗೆ ಸೇರಿದ 1 ಎಕರೆ 10 ಗುಂಟೆ ಜಮೀನು ಭೂ ಸ್ವಾಧೀನ ಆಗಿದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೇನೆ. ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಸುಳ್ಳು ಅಂಶಗಳನ್ನು ಬರೆಯಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಜಮೀನು ಎಕರೆಗೆ 40 ರಿಂದ 50 ಲಕ್ಷ ರೂಪಾಯಿ ಬೆಲೆ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)**

**ಓ. ಹೇ. ಕೆ. ಸರಿ ಅದೆ.**

**ಸಹಿ**

**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,**
**ಜಮಖಂಡಿ.**

**ಸಹಿ**
**ಸಾಕ್ಷಿಯ ಸಹಿ**